ಈ ನಿರ್ಬಂಧವು ಮುಗಿದ ನಂತರ ಬಾಕಿ ಉಳಿದಿರುವ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು.

ತೇರದಾಳ ಕ್ಷೇತ್ರದಲ್ಲಿರುವ ಸವಳು ಜವಳಿ ಭೂಮಿಯ ಬಗ್ಗೆ

80 (122) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತಕ್ಷೇತ್ರದಲ್ಲಿ ಸಾವಿರಾರು ಎಕರೆ ಫಲವತ್ತಾದ ಜಮೀನುಗಳು ಸವಳು ಜವಳಿನಿಂದ ಬರಡು ಬಿದ್ದಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಯಾವ ಕ್ರಮಗಳನ್ನು ಕೈಗೊಂಡು ಸಮಸ್ಯೆಯನ್ನು ನಿವಾರಣೆ ಮಾಡಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ. 2569–27 ಹೆಕ್ಟೇರ್ ಪ್ರದೇಶ ಸವಳು ಜವಳಿನಿಂದ ಬರಡು ಬಿದ್ದಿರುತ್ತದೆ.

ಆ) 2569.27 ಹೆಕ್ಟೇರ್ ಜಮೀನಿನ ಪೈಕಿ 429.26 ಹೆಕ್ಟೇರ್ ಪ್ರದೇಶದ ಸುಧಾರಣಾ ಕ್ರಮವನ್ನು ಕೈಗೊಳ್ಳಲಾಗಿದೆ, ಮತ್ತು 838.04 ಹೆಕ್ಟೇರ್ ಪ್ರದೇಶದ ಸುಧಾರಣೆ ಕುರಿತು ಅಂದಾಜು ಪತ್ರಿಕೆ ತಯಾರಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದ್ದು, ಸಧ್ಯದಲ್ಲಿ ಕಾಮಗಾರಿ ಪ್ರಾರಂಭಿಸ ಲಾಗುವುದು.

ಕೆ.ಹೆಚ್.ಡಿ.ಸಿ. ನೇಕಾರರಿಗೆ ಹೆಚ್ಚಿನ ಸೌಲಭ್ಯಗಳ ಬಗ್ಗೆ

81 (123) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ನೇಕಾರರ ಅಭಿವೃದ್ಧಿಯ ಉದ್ದೇಶಗಳಿಗೆ ನೀಡಿರುವ ಸಾಲ ಮನ್ನಾ, ಬಡ್ಡಿ ಮನ್ನಾ, 3% ರಿಯಾಯಿತಿ ಬಡ್ಡಿ ಸಾಲ ಮತ್ತು ವಿದ್ಯುತ್ ರಿಯಾಯಿತಿಯಂತಹ ಯಾವುದೇ ಸೌಲಭ್ಯಗಳು

ಕೆ.ಹೆಚ್.ಡಿ.ಸಿ. ನೇಕಾರರಿಗೆ ತಲುಪದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಅತ್ಯಂತ ಕಡುಬಡವರಾದ ಸದರಿ ನೇಕಾರರು ಸುಮಾರು 20 ವರ್ಷಗಳ ಹಿಂದೆ ಪಡೆದ ಗೃಹ ಸಾಲ (ಹೆಚ್.ಡಿ.ಎಫ್.ಸಿ. ಮತ್ತು ಡಚ್) ಯೋಜನೆಗಳಲ್ಲಿಯ ಸಾಲವನ್ನು ಮನ್ನಾ ಮಾಡಲಾಗುವುದೇ?

ಇ) ಇಲ್ಲವಾದಲ್ಲಿ ಬೇರೆ ನೇಕಾರರಂತೆ ಅವರಿಗೂ ಸಹ ರಿಯಾಯಿತಿಯಲ್ಲಿ ಸಾಲವನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು) :

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯ ಸರ್ಕಾರದ ಶೇಕಡ 3 ರ ಬಡ್ಡಿ ದರದಲ್ಲಿ ಸಹಕಾರಿ ಸಂಘಗಳು / ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಾಲ ನೀಡುವ ಯೋಜನೆಯಲ್ಲಿ ಕೆ.ಹೆಚ್.ಡಿ.ಸಿ ನೇಕಾರರೂ ಸಾಲ ಪಡೆಯ ಬಹುದಾಗಿದೆ.

ಸರ್ಕಾರಿ ಭೂಮಿಯ ಅಕ್ರಮ ಸಾಗುವಳಿ ಹಾಗೂ ಒತ್ತುವರಿ

82 (124) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಮತ್ತು ಮುಧೋಳ ತಾಲ್ಲೂಕುಗಳಲ್ಲಿ ರಾಜ್ಯ ಸರ್ಕಾರದ ಅಧೀನಕ್ಕೆ ಒಳಪಟ್ಟ ಗಾವಟಾಣ, ಡಿಸ್. ಫಾರೆಸ್ಟ್ ಮತ್ತು ಇತರೆ ಎಷ್ಟು ಎಕರೆ ಭೂಮಿ ಇದೆ.,

ಆ) ಇದ್ದಲ್ಲಿ, ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಸಾಗುವಳಿ ಹಾಗೂ ಒತ್ತುವರಿ ಮಾಡಿಕೊಂಡ ಜಮೀನು ಎಷ್ಟು;

ಇ) ಸದರಿ ಒತ್ತುವರಿ ಪ್ರಕ್ರಿಯೆಯನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ; (ವಿವರಗಳನ್ನು ಒದಗಿಸುವುದು);